ವಿದೇಶಿ ಸಹಾಯದಿಂದ ವಿದ್ಯುಚ್ಛಕ್ತಿ ಉತ್ಪಾದನೆ

537 - ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿದೇಶಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಮಾಡಿಕೊಂಡಿರುವ ಕರಾರುಗಳ ವಿವರಗಳೇನು?

ಆ) ಉತ್ಪಾದನೆಗೆ ಸಂಬಂಧಿಸಿದ ಷರತ್ತುಗಳು, ವಿತರಣೆಗೆ ಸಂಬಂಧಿಸಿದ ಷರತ್ತುಗಳು ಹಾಗೂ ವಿದೇಶಿ ಸಂಸ್ಥೆಗಳಿಗೆ ಪಾವತಿಸುವ ಸಂಬಂಧ ಷರತ್ತುಗಳ ವಿವರಗಳೇನು?

ಇ) ವಿವಿಧ ಸಂಸ್ಥೆಗಳ ಜೊತೆಗೆ ಮಾಡಿಕೊಂಡಿರುವ ಒಪ್ಪಂದಗಳ ವಿವರಗಳೇನು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಈವರೆಗೆ ಯಾವ ವಿದೇಶಿ ಸಂಸ್ಥೆಯೊಂದಿಗೂ ಸಹ ಭಾಗಿತ್ವದಲ್ಲಿ ಕರಾರು (ಅಗ್ರಿಮೆಂಟ್) ಮಾಡಿಕೊಂಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆಯ ಕಂಗ್ರಾಳಿ (ಕೆ.ಹೆಚ್) ಹತ್ತಿರವಿರುವ ಸೇತುವೆ ಬಗ್ಗೆ

464 - ಶ್ರೀ ಬಿ.ಪಿ. ಪಾಟೀಲ (ಉಚ್ಚಾಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲೆಯ ಬೆಳಗಾಂವ ತಾಲ್ಲೂಕಿನ ಕಂಗ್ರಾಳಿ(ಕೆ.ಹೆಚ್) ಹತ್ತಿರವಿರುವ ಸೇತುವೆಯ ಮೇಲೆ (ಮಳೆಗಾಲದಲ್ಲಿ) ನೀರು ಹರಿಯುವುದು ಸರಕಾರದ ಗಮನಕ್ಕೆ ಬಂದಿರುವುದೆಯೇ?

ಆ) ಈ ಸೇತುವೆ ಕಾಮಗಾರಿಗಾಗಿ ಅಂದಾಜು ನಕ್ಷೆ ಹಾಗೂ ಪತ್ರಿಕೆಯನ್ನು ತಯಾರಿಸಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಸದರಿ ಸೇತುವೆಯ ಕಾಮಗಾರಿಗೆ ಆದ ವಿಳಂಬಕ್ಕೆ ಕಾರಣವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಇಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸದರಿ ಕಾಮಗಾರಿಯು 1993-94 ಹಾಗೂ 1994-95ನೇ ಸಾಲಿನಲ್ಲಿ ಸೇರ್ಪಡೆಯಾಗಿಲ್ಲ.

ಖಾಸಗಿ ವಿದ್ಯುತ್ ಉತ್ಪಾದನೆ ಕುರಿತು

534 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಖಾಸಗಿಯವರು ವಿದ್ಯುತ್ ಉತ್ಪತ್ತಿ ಮಾಡಲು ಉದ್ದೇಶಿಸಿದ್ದರೆ ಆ ವಿದ್ಯುತ್ತಿನ ವಿತರಣೆ ಮಾಡುವ ಸಂಸ್ಥೆಯೊಡನೆ ಯಾವುದಾದರೂ ಒಪ್ಪಂದ ಆಗಿದೆಯೇ? ಅಥವಾ ಚರ್ಚೆ ನಡೆಯುತ್ತಾ ಇದೆಯೇ? ಅವರು ಅಪೇಕ್ಷಿಸಿರುವ ಯೂನಿಟ್‌ದ ದರವೇನು?

ಆ) ಅಸಾಂಪ್ರದಾಯಕ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳೇನಾದರೂ ಪರಿಶೀಲನೆಯಲ್ಲಿವೆಯೇ? ಇದ್ದರೆ ಹೆಸರು ಅಗತ್ಯವಾದ ಬಂಡವಾಳ ಮತ್ತು ಬಂಡವಾಳದ ಮೂಲ ಇವುಗಳನ್ನು ಒದಗಿಸುವುದು.

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :